ಕರ್ನಾಟಕ ಸರ್ಕಾರ

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರು ಹೊರಡಿಸಿದ ನಡವಳಿಗಳು

ವಿಷಯ: ವಿಶೇಷ ದತ್ತು ಕೇಂದ್ರಗಳಲ್ಲಿ ತೊಟ್ಟಿಲು ಕಂದನ ಸ್ವಾಗತ ಕೇಂದ್ರ ಪ್ರಾರಂಭಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,ಬಳ್ಳಾರಿ. ಇವರ ಪತ್ರ ಸಂಖ್ಯೆ: ಜಿಮರಘ/ಬ/ತೊಬಮಂ/13-14 ದಿನಾಂಕ: 12-03-13

2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 20-04-13

3. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,ಬಳ್ಳಾರಿ. ಇವರ ಪತ್ರ ಸಂಖ್ಯೆ: ಜಿಮರಘ/ಬ/ತೊಬಮಂ/13-14 ದಿನಾಂಕ: 26-04-13

---

ಪ್ರಸ್ತಾವನೆ:

ವಿಶೇಷ ದತ್ತು ಕೇಂದ್ರಗಳಲ್ಲಿ ತೊಟ್ಟಿಲು ಕಂದನ ಸ್ವಾಗತ ಕೇಂದ್ರ ಪ್ರಾರಂಭಿಸಲು ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಮಾರ್ಗಸೂಚಿ, ಚಾಪ್ಟರ್ 3ರ ಕಂಡಿಕೆ 3.3.3. ರಲ್ಲಿ ಅವಕಾಶ ನೀಡಲಾಗಿರುತ್ತದೆ. ಉಲ್ಲೇಖ 1ರ ಪತ್ರದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಬಳ್ಳಾರಿ ಇವರು ಜಿಲ್ಲೆಯಲ್ಲಿ ವಿವಿಧ 60 ಸ್ಥಳಗಳಲ್ಲಿ ತೊಟ್ಟಿಲು ಕೇಂದ್ರ ಪ್ರಾರಂಭಿಸಲು ಅನುದಾನ ಮಂಜೂರು ಮಾಡುವಂತೆ ರೂ.98760/-ಗಳಿಗೆ ಜಿಲ್ಲಾಧಿಕಾರಿಗಳಿಂದ ಅನುಮೋದಿತವಾದ ಪ್ರಸ್ತಾವನೆ ಕಳುಹಿಸಿರುತ್ತಾರೆ. ಉಲ್ಲೇಖ 2ರ ಈ ಕಛೇರಿ ಪತ್ರದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ತೊಟ್ಟಿಲುಗಳನ್ನು ಸ್ಥಾಪಿಸುವ 60 ಸ್ಥಳಗಳ ಪಟ್ಟಿ ನೀಡುವಂತೆ ತಿಳಿಸಲಾಗಿತ್ತು. ಅದರಂತೆ ಉಲ್ಲೇಖ 3ರಲ್ಲಿ ಜಿಲ್ಲೆಯ ವಿವಿಧ ಕೇಂದ್ರ/ಸಂಸ್ಥೆಗಳಲ್ಲಿ ತೊಟ್ಟಿಲನ್ನು ಸ್ಥಾಪಿಸುವ ಸ್ಥಳದ ಪಟ್ಟಿಯನ್ನು ನೀಡಿರುತ್ತಾರೆ.

ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಮಾರ್ಗಸೂಚಿಯಲ್ಲಿ ತೊಟ್ಟಿಲು ಕೇಂದ್ರ ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಳ್ಳಾರಿ ಇವರು ಟೋಪ್ರಾ ಪ್ಲಾಸ್ಟಿಕ್ ಅಂಡ್ ಮೆಟಲ್ ಇಂಡಸ್ಟ್ರಿ, ಬಳ್ಳಾರಿ ಇವರಿಂದ 60 ತೊಟ್ಟಿಲು ಖರೀದಿಸಲು 98760/- ರೂಪಾಯಿಗಳಿಗೆ ಮಂಜೂರಾತಿ ಆದೇಶ ನೀಡಿದ್ದು ಅನುದಾನ ಬಿಡುಗಡೆಗೆ ಕೋರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕೋರಿರುತ್ತಾರೆ. ಇದನ್ನು ಹೊಸ ಆವಿಷ್ಕಾರ ಯೋಜನೆಯಾಗಿ ಕೈಗೆತ್ತಿಕೊಳ್ಳಲು

ಸ್ವೀಕೃತ ಸಂಖ್ಯೆ 761 ದಿ॥ 25/09/17

ನಿರ್ಧರಿಸಿ,ಬಳ್ಳಾರಿ ಜಿಲ್ಲೆಯಲ್ಲಿನ 60 ವಿವಿಧ ಸ್ಥಳಗಳಲ್ಲಿ ತೊಟ್ಟಿಲನ್ನು ಖರೀದಿಸಿ ಅಳವಡಿಸಲು 2012-13ನೇ ಸಾಲಿನ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯಲ್ಲಿ ಲಭ್ಯವಿರುವ ಉಳಿಕೆ ಅನುದಾನದಲ್ಲಿ ರೂ. 98760/- (ತೊಂಬತ್ತೆಂಟು ಸಾವಿರದ ಏಳುನೂರಾ ಅರವತ್ತು ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸಂಖ್ಯೆ: ಮಮಅಇ/ಐಸಿಪಿಎಸ್/ದತ್ತು-1/12-13 1270

ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ನಿರ್ದೇಶನಾಲಯ
ಬೆಂಗಳೂರು .- 01
ದಿನಾಂಕ: 18-06-13

-: ಆ ದೇ ಶ :-

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರು ಬಳ್ಳಾರಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ತೊಟ್ಟಿಲುಗಳನ್ನು ಅಳವಡಿಸಲುತೊಟ್ಟಿಲು ಕಂದನ ಸ್ವಾಗತ ಕೇಂದ್ರ ಯೋಜನೆಯಡಿ 60 ತೊಟ್ಟಿಲುಗಳನ್ನು ಭೋಪ್ರಾ ಪ್ಲಾಸ್ಟಿಕ್ ಅಂಡ್ ಮೆಟಲ್ ಇಂಡಸ್ಟ್ರಿ, ಬಳ್ಳಾರಿ ಇವರಿಂದ ಖರೀದಿಸಲು ಒಟ್ಟು ರೂ. 98760/- (ತೊಂಬತ್ತೆಂಟು ಸಾವಿರದ ಏಳುನೂರಾ ಅರವತ್ತು ರೂಪಾಯಿಗಳು ಮಾತ್ರ) ಗಳಿಗೆ ಮಂಜೂರಾತಿ ನೀಡಲಾಗಿದೆ .ಈ ವೆಚ್ಚವನ್ನು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯಡಿ ಲಭ್ಯವಿರುವ ಅನುದಾನದಲ್ಲಿ ಭರಿಸಲು ಆದೇಶಿಸಿದೆ . ಈ ಅನುದಾನವನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಬಳ್ಳಾರಿ ಇವರು ಉದ್ದೇಶಿತ ತೊಟ್ಟಿಲು ಖರೀದಿಗೆ ವೆಚ್ಚ ಮಾಡಿ ನಿರ್ಧರಿತ ಸ್ಥಳಗಳಲ್ಲಿ ತೊಟ್ಟಿಲುಗಳನ್ನು ಅಳವಡಿಸಿ ಬಳಕೆ ಪ್ರಮಾಣ ಪತ್ರ ಸಲ್ಲಿಸಲು ತಿಳಿಸಿದೆ. .

ಸದಸ್ಯ ಕಾರ್ಯದರ್ಶಿಗಳು 21/6/13
ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಬೆಂಗಳೂರು .- 01

ಪ್ರತಿಯನ್ನು:

1. ಲೆಕ್ಕಾಧಿಕಾರಿಗಳು, ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ. ಇವರಿಗೆ ಮಾಹಿತಿಗಾಗಿ.
3. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.ಬಳ್ಳಾರಿ ಇವರಿಗೆ ಮಾಹಿತಿಗಾಗಿ
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಬಳ್ಳಾರಿ ಇವರಿಗೆ ಮಾಹಿತಿಗಾಗಿ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
6. ಕಛೇರಿ ಪ್ರತಿ